# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಡಾ.ಎಂ.ಜಿ.ಮುಳೆ (ವಿಧಾನ ಸಭಾ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **325**

**ಉತ್ತರಿಸಬೇಕಾದ ದಿನಾಂಕ** : **29-01-2026**

**ಉತ್ತರಿಸಬೇಕಾದ ಸಚಿವರು** : **ಸನ್ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು (PACS) ಕೇಂದ್ರ ಸರ್ಕಾರದ ತಂತ್ರಾಂಶದೊಂದಿಗೆ ಲಿಂಕ್ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; | ದಿನಾಂಕ:31-03-2024 ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ 6109 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ ಮೊದಲ ಹಂತದಲ್ಲಿ 5491 ಪ್ಯಾಕ್ಸ್‌ಗಳ ಗಣಕೀಕರಣ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಈ ಸಂಘಗಳಿಗೆ ಹಾರ್ಡ್ ವೇರ್ ಗಳಾದ Desktop, Multifunctional Device (Printer, Scanner, Copier), Physical VPN device, Biometric scanner, UPS ಗಳನ್ನು ಸರಬರಾಜು ಮಾಡಲಾಗಿದೆ. ಕೇಂದ್ರ ಸರ್ಕಾರದ ಏಕೀಕೃತ ತಂತ್ರಾಂಶದೊಂದಿಗೆ ಇದುವರೆಗೆ 3684 ಪ್ಯಾಕ್ಸ್ ಗಳ ಗಣಕೀಕರಣದ Go-Live ಹಂತ ಪೂರ್ಣಗೊಳಿಸಲಾಗಿದೆ. |
| ಆ) | ಈ ಗಣಕೀಕರಣರಿಂದ ರೈತರಿಗೆ ಸಿಗಲಿರುವ ನೇರ ಸೌಲಭ್ಯಗಳೇನು ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ದಿನಾಂಕ:31-03-2024 ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ 6109 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 5491 ಪ್ಯಾಕ್ಸ್‌ಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಈ ಪೈಕಿ 2585 ಪ್ಯಾಕ್ಸ್ ಗಳು ಸಾಮಾನ್ಯ ಸೇವಾ ಕೇಂದ್ರಗಳಾಗಿ (Common Service Centres) ಪರಿವರ್ತನೆಯಾಗಿರುತ್ತವೆ.<br><br>ಪ್ಯಾಕ್ಸ್ ಗಳು ಸಾಲ ಮತ್ತು ಸಾಲೇತರ ಸೇವೆಗಳನ್ನು ರೈತರಿಗೆ ಮತ್ತು ಗ್ರಾಮೀಣ ಪ್ರದೇಶದ ಸದಸ್ಯರಿಗೆ ಒದಗಿಸುವ ಜೊತೆಗೆ ಸಾಮಾನ್ಯ ಸೇವಾ ಕೇಂದ್ರಗಳಾಗಿ 4979 ಪ್ಯಾಕ್ಸ್‌ಗಳು ನೋಂದಣಿಯಾಗಿದ್ದು, ಈ ಪೈಕಿ 2270 ಪ್ಯಾಕ್ಸ್‌ಗಳು ಪ್ರಧಾನ ಮಂತ್ರಿ ಕಲ್ಯಾಣ ಯೋಜನೆಗಳು, ಆಧಾರ್ ಸೇವೆಗಳು, ಪ್ಯಾನ್ ಕಾರ್ಡ್ ಸೇವೆಗಳು, ಪಾಸ್ ಪೋರ್ಟ್ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ಕೃಷಿ ಸೇವೆಗಳು, ಆರೋಗ್ಯ ಇಲಾಖೆ ಸೇವೆಗಳು, ಆನಲೈನ್ ಪಾವತಿ ಸೇವೆಗಳು, ಶೈಕ್ಷಣಿಕ ಸೇವೆಗಳು, ರೈಲ್ವೆ/ಬಸ್/ವಿಮಾನ ಟಿಕೆಟ್ ಬುಕ್ಕಿಂಗ್ ಸೇವೆಗಳು ಹೀಗೆ ಒಟ್ಟಾರೆಯಾಗಿ ರೈತರಿಗೆ 300 ವಿವಿಧ ಬಗೆಯ ಇ-ಸೇವೆಗಳನ್ನು ಒದಗಿಸುತ್ತಿರುತ್ತವೆ. |

| | | |
|---|---|---|
| | | ಯೋಜನೆಯಲ್ಲಿ ಆಯ್ಕೆಯಾದ ಎಲ್ಲಾ ಪ್ಯಾಕ್ಸ್‌ಗಳ ಮಾಹಿತಿಯು (MIS) ಸಾಲ ಒದಗಿಸುವ ಸಂಸ್ಥೆ ಮತ್ತು ಸರ್ಕಾರದ ಅಂಗ ಸಂಸ್ಥೆಗಳಿಗೆ ಲಭ್ಯವಾಗುವುದರಿಂದ ಈ ಸಂಸ್ಥೆಗಳು ಪ್ಯಾಕ್ಸ್‌ಗಳ ಮೂಲಕ ರೈತರಿಗೆ ಮತ್ತು ಗ್ರಾಮೀಣ ಭಾಗದ ಜನರಿಗೆ ಸಾಲ ಮತ್ತು ಸಾಲೇತರ ಸೇವೆಗಳನ್ನು ಒದಗಿಸಲು ಮತ್ತು ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಸಹಾಯವಾಗಲಿದೆ.<br><br>ಪ್ಯಾಕ್ಸ್‌ಗಳು ಈ ಸೇವೆಗಳನ್ನು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಭಾಗದ ಜನರಿಗೆ ನೀಡುತ್ತಿರುವುದರಿಂದ ಮಧ್ಯವರ್ತಿಗಳ ಹಾವಳಿ ತಡೆಗಟ್ಟಲು ಸಹಾಯವಾಗಿದೆ. |

**ಕಡತ ಸಂಖ್ಯೆ: ಸಿಒ 41 ಸಿಎಲ್‌ಎಸ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ